ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೮೪ (೨೧೪೧)

ಸದಸ್ಯರ ಹೆಸರು ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್

ಉತ್ತರಿಸುವ ಸಚಿವರು ಶ್ರೀ ಬಂಡೆಪ್ಪ ಖಾಶೆಂಪೂರ (ಕೃಷಿ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರವು ಸಣ್ಣ ಮತ್ತು ಅತಿ ಸಣ್ಣ ರಯತಾಪಿ ವರ್ಗದವರಿಗೆ ಜೈವಿಕ ತಂತ್ರಜ್ಞಾನ ತರಬೇತಿಯನ್ನು ನೀಡುವುದರ ಜೊತೆಗೆ ಆರ್ಥಿಕ ಸಹಾಯವನ್ನ ಕಲ್ಪಿಸಿಕೊಂಡಲಾಗಿದೆಯೇ , ಹಾಗಿದ್ದಲ್ಲಿ, ಈ ಯೋಜನೆಯಿಂದ ಪ್ರಯೋಜನವನ್ನು ಪಡೆದಿರುವ ಫಲಾನುಭವಿಗಳೆಷ್ಟು?	ಕೃಷಿ ಇಲಾಖೆಯ ವತಿಯಿಂದ ಜೈವಿಕ ತಂತ್ರಜ್ಞಾನದ ಬಗ್ಗೆ ರೈತರಿಗೆ ತರಬೇತಿಯನ್ನು ಮಾತ್ರ ನೀಡಲಾಗುತ್ತಿದೆ
ಆ)	ಈ ಯೋಜನೆಯನ್ನು ಮುಮದುವರಿಸಿ, ರೈತಾಪಿ ವರ್ಗದವರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದೇ?	

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೨೫೪

ಸದಸ್ಯರ ಹೆಸರು ಶ್ರೀ ಟಿ ಹೆಚ್ ಶಿವಶಂಕರಪ್ಪ (ತರಿಕೆರೆ)

ಉತ್ತರಿಸುವ ಸಚಿವರು ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕೆ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ತೋಟಗಾರಿಕೆ ಸಹಾಯಕರ ಹುದ್ದೆಯನ್ನು ತುಂಬುವಲ್ಲಿ ಕೆ ಪಿ ಎಸ್ ಸಿ ವಿಳಂಬ	ಕೆ ಪಿ ಎಸ್ ಸಿ ಹೊರಡಿಸಿದ ತೋಟಗಾರಿಕೆ ಸಹಾಯಕರುಗಳ ನೇಮಕಾತಿ ಅಧಿಸೂಚನೆಗೆ ಮಾನ್ಯ ಕೆ ಟ ಟಿಯು ತಡೆಯಾಜ್ಞೆ ನೀಡಿರುವ ಕಾರಣ ಹುದ್ದೆಗಳನ್ನು ತುಂಬುವಲ್ಲಿ

	ಮಾಡುತ್ತಿರಲು ಕಾರಣವೇನು?	ವಿಳಂಬವಾಗಿರುತ್ತದೆ
ಆ)	ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ	ತೋಟಗಾರಿಕೆ ಸಹಾಯಕ ಹುದ್ದೆಗಳನ್ನು ಕೆ ಪಿ ಎಸ್ ಸಿ ಮೂಲಕ ನೇರ ನೇಮಕತಿಯಿಂದ ಭರ್ತಿ ಮಾಡುವವರಿಗೆ ಗುತ್ತಿಗೆ ಆಧಾರದ ಮೇಲೆ ೬ ತಿಂಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ
ಇ)	ಈ ಇಲಾಖೆ ಕೆ ಪಿ ಎಸ್ ಸಿ ಯಿಂದ ನೇಮಕಾತಿಗೆ ಸೂಚಿಸಿದ್ದು ನ್ಯಾಯಾಲಯ ತಡೆಯಾಜ್ಞೆ ತಂದಿರುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು)	ಮಾನ್ಯ ಕೆ ಎ ಟಿ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ತೋಟಗಾರಿಕೆ ಸಹಾಯಕ ವೃಂದದ ವಿದ್ಯಾರ್ಹತೆ ಬಗ್ಗೆ ವೃಂದ ಮತ್ತು ನೇಮಕಾರಿ ನಿಯಮಗಳಿಗೆ ತಿದುಪಡಿಯಾಗಬೇಕಾಗಿರುತ್ತದೆ ಈ ಬಗ್ಗೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದೆ ಮತ್ತು ಬಂದಂತಹ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿದೆ ವೃಂದ ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಿ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೮೯ (೧೮೫೭)

ಸದಸ್ಯರ ಹೆಸರು ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ)

ಉತ್ತರಿಸುವ ಸಚಿವರು ಶ್ರೀ ಬಂಡೆಪ್ಪ ಖಾಶೆಂಪೂರ (ಕೃಷಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತರಿಗೆ ಎತ್ತು ಹಾಗೂ ಗಾಡಿಗಳನ್ನು ವಿತರಿಸುವ	ರೂ ೨೦೦೦ ೦೦ ಲಕ್ಷ